ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ
ಸಿರುಗುಪ್ಪ
**ಸಿ.ಸಿ.ನಂ:673/2015**

ಸಿಡಬ್ಲ್ಯೂ **03** ಪಿ.ಡಬ್ಲ್ಯೂ **03**

ಸಾಕ್ಷಿದಾರರ ಹೆಸರು ಃ ಅಂಜಿನೇಯ
ತಂದೆಯ ಹೆಸರು ಃ ಮುದುಕಪ್ಪ
ವಯಸ್ಸು ಃ **35** ವರ್ಷ
ವೃತ್ತಿ ಃ ಡ್ರೈವಿಂಗ್
ವಾಸ ಃ ರಾಯಚೂರು

ಪ್ರಮಾಣ ಮಾಡಿದ ದಿನಾಂಕಃ **20.03.2019**

ಮುಖ್ಯ ವಿಚಾರಣೆಃ ಎ .ಪಿ .ಪಿ ಇವರಿಂದ.

ನಾನು ಸುಮಾರು **3** ವರ್ಷಗಳ ಹಿಂದೆ ಕೆಎ-**30**-**3326** ಬೊಲೆರೊ ವಾಹನದ ಚಾಲಕನಾಗಿ ಕೆಲಸ ಮಾಡುತ್ತಿದ್ದೇನು. ದಿಃ **18-02-2015** ರಂದು ಬೆಳಿಗ್ಗೆ ಬಳ್ಳಾರಿಗೆ ಮಷಿನರಿ ಸಾಮಾನುಗಳನ್ನು ತರಲು ಸದರಿ ವಾಹನದಲ್ಲಿ ಹೊರಟ್ಟಿದ್ದೇನು. ಸಮಯ **10-45**ರ ಸುಮಾರಿಗೆ ಸಿರುಗುಪ್ಪ ಪಟ್ಟಣದ ವೆಲ್‌ಕಮ್ ಬೋರ್ಡ್ ಸಮೀಪ ನಾನು ಎಡಗಡೆ ರಸ್ತೆಯ ಬದಿಯಿಂದ ಹೋಗುತ್ತಿದ್ದಾಗ ಸಿರುಗುಪ್ಪ ಕಡೆಯಿಂದ ಕೆಎಸ್‌ಆರ್‌ಟಿಸಿ ಬಸ್ ಅತೀ ವೇಗ ಹಾಗೂ ನಿಷ್ಕಾಳಜಿತದಿಂದ ಬಂದು ಮುಂದೆ ಹೋಗುತ್ತಿದ್ದ ಮೊಟಾರ್ ಸೈಕಲ್‌ಗೆ ಡಿಕ್ಕಿ ಹೊಡೆಸಿ ನಂತರ ನಾನು ಹೊಡಿಸುತ್ತಿದ್ದ ಬೊಲೆರೊ ವಾಹನಕ್ಕೆ ಅಪಘಾತಪಡಿಸಿರುತ್ತದೆ. ಸದರಿ ಅಪಘಾತದಲ್ಲಿ ನನಗೆ ಬಲಗಾಲು, ಬಲಗೈನ ಮೊಣಕೈ ಹತ್ತಿರ ಗಾಯಗಳಾಗಿರುತ್ತವೆ. ಮೊಟಾರ್ ಸೈಕಲ್ ಸವಾರರಿಗೆ ಏನು ಆಗಿರುತ್ತದೆ ಎಂದು ಗೊತ್ತಿರುವುದಿಲ್ಲ, ಕಾರಣ ನನಗೆ ಪ್ರಜ್ಞೆ ಇರಲಿಲ್ಲ. ನಂತರ ನನ್ನನ್ನು ವಿಮ್ಸ್ ಆಸ್ಪತ್ರೆ, ಬಳ್ಳಾರಿ ಹಾಗೂ ಮಣಿಪಾಲ್ ಆಸ್ಪತ್ರೆ ಬೆಂಗಳೂರಿಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋಗಿರುತ್ತಾರೆ. ನಾನು ಬಸ್ ಚಾಲಕನನ್ನು ನೋಡಿರುವುದಿಲ್ಲ. ಈ ಕುರಿತು ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುವುದಿಲ್ಲ.

ಈ ಹಂತದಲ್ಲಿ ಸಸಅ ರವರು ಆರೋಪಿಯನ್ನು ಗುರುತಿಸದೇ ಇದ್ದಕ್ಕಾಗಿ ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅವಕಾಶ ನೀಡಬೇಕೆಂದು ಕೇಳಿಕೊಂಡಿದ್ದರ ಮೇರೆಗೆ ಅನುಮತಿ ನೀಡಲಾಯಿತು.

ಪಾಟೀ ಸವಾಲುಃ ಶ್ರೀ ಸಸಅ ರವರಿಂದ

ದಿಃ 18-02-2015ರಂದು ಬೆಳಿಗ್ಗೆ 10-45ರ ಸುಮಾರಿಗೆ ಸಿರುಗುಪ್ಪ ವೆಲ್‌ಕಮ್ ರಸ್ತೆಯ ಮೇಲೆ ಕರ್ನಾಟಕ ಬಸ್ ಮುಂದೆ ಹೋಗುತ್ತಿದ್ದ ಮೊಟಾರ್ ಸೈಕಲ್ ಸವಾರರಿಗೆ ಅಪಘಾತಪಡಿಸಿದಾಗ ಮೊಟಾರ್ ಸೈಕಲ್ ಸವಾರನಿಗೆ ಹಣೆಯ ಮೇಲೆ, ಮೇಲಿನ ತುಟಿಗೆ ರಕ್ತಗಾಯವಾಗಿದ್ದು, ಮೊಟಾರ್ ಸೈಕಲ್ ಮೇಲೆ ಹಿಂದೆ ಕುಳಿತಿದ್ದ ವ್ಯಕ್ತಿಗೆ ಎಡಕಣ್ಣಿನ ಹತ್ತಿರ, ಎಡಮುಂಗೈಗೆ ಮತ್ತು ಎಡಮೊಣಕಾಲಿಗೆ ತರಚಿದ ಗಾಯಗಳಾಗಿರುತ್ತವೆ ಎಂದರೆ ಸರಿ ಅಲ್ಲ. ಮೊಟಾರ್ ಸೈಕಲ್ ಸವಾರನ ಹೆಸರು ಪೃಥ್ವಿರಾಜ ಮತ್ತು ಹಿಂದೆ ಕುಳಿತಿದ್ದ ವ್ಯಕ್ತಿ ಖಾದರ್ ಬಾಷ ಎಂದು ತಿಳಿದು ಬಂದಿರುತ್ತದೆ ಎಂದರೆ ಸರಿ ಅಲ್ಲ.

ಪಾಟೀ ಸವಾಲುಃ ಶ್ರೀ ಹೆಚ್ ಎಂ ವಕೀಲರಿಂದ

ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆ ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

ಜೆ ಎಂ ಎಫ್ ಸಿ ಸಿರುಗುಪ್ಪ